ತ್ತೇನೆ. ಸರ್ಕಾರ ೧೭ರಿಂದ ೨೭ರವರೆಗೆ ಸುಮ್ಮನಿರುವುದನ್ನು ನೋಡಿದರೆ ಸರ್ಕಾರದ ಕಾರ್ಯಕ್ರಮದಲ್ಲಿ ಜನರಿಗೆ ಖಂಡಿತ ವಿಶ್ವಾಸ ಹುಟ್ಟುವುದಿಲ್ಲ. ಇದರ ಬಗ್ಗೆ ತಾವು ಉತ್ತರಿಸಬೇಕು. I think ghastly incident like that apart from investigation you will have to institute judicial enquiry over this matter.

ಶ್ರೀ ಬಿ. ರಾಚಯ್ಯ —ಮಾನ್ಯ ಮೊಯಿಲಿಯಂಪರರು ಕೆಲವು ವಿವರಗಳನ್ನು ಕೇಳಿದ್ದಾರೆ. ಪೋಲೀಸರು ಗುಂಡೇಟು ಹೊಡೆದುದ್ದರಿಂದ ಸತ್ತಿದ್ದಾರೆಂದು ಹೇಳಿದ್ದಾರೆ. ಸತ್ತವರ ಮೈ ಮೇಲೆ ಗುಂಡುಗಳು ಇದ್ದವು ಎಂದು ಕೂಡ ಹೇಳಿದ್ದಾರೆ. ಬಹುಶಃ ಪೋಸ್ಟ್ ಮಾರ್ಟಂ ರಿಪೋರ್ಟಿನಲ್ಲಿ ಏನಿದೆ ಎಂಬುದು ಆಮೇಲೆ ಗೊತ್ತಾಗುತ್ತದೆ, ಈವತ್ತು ನಾನು ಇಲಾಖಾ ತನಿಖೆ ಮಾಡಿರುವ ಉದ್ದೇಶ ಇಷ್ಟೆ. ಆ ಕಡೆ ಗುಂಡು ಹೊಡೆಯಿರಿ ಎಂದು ಹೇಳಿದಾಗ ಮನೆಗೆ ಗುಂಡು ಹೊಡೆದರೂ ಮನೆಯೊಳಗೆ ಹೊಡೆಯುವುದಕ್ಕೆ ಸಾಧ್ಯವಿಲ್ಲ. ಅವರು ಮೆರವಣಿಗೆ ಮನೆಯಲ್ಲಿದ್ದಾರೆ. ಆ ಕಡೆ ಈ ಕಡೆ ಗುಂಡು ಹಾರಿಸುತ್ತಿದ್ದಾರೆ. ಜನ ಹೆದರಿಕೊಂಡು ಆ ಕಡೆ ಹೋಗದೆ ಒಂದು ಫರ್ಲಾಂಗ್ ದೂರದಲ್ಲಿದ್ದಾರೆ. ಎರಡು ದಿನಗಳವರೆಗೆ ಜನರು ಯಾರೂ ಆ ಕಡೆ ಹೋಗಿಲ್ಲ ಎಂಬುದು ಒಂದು ಸಂದಿಗ್ಧ ಯಾದರೆ ಪೋಲೀಸರಿಗೆ ಜನರು ಗುಂಡು ಹಾರಿಸಿದ್ದಾರೆಂದು ಪುತ್ತೊಂದು ವರ್ತಮಾನ ಬಂದಿದೆ. ಈ ಹೇಳಿಕೆಯನ್ನು ತೆಗೆದುಕೊಂಡ ಮೇಲೆ ಏಟು ತಿಂದು ಒಂದ ಪೋಲೀಸರನ್ನು ಸಸ್ಪೆಂಡ್ ಮಾಡುವುದು ನ್ಯಾಯವಾಗಿ ಕಾಣುವುದಿಲ್ಲವೆಂದು ಸಸ್ಪೆಂಡ್ ಮಾಡಿಲ್ಲ. ಆದಕ್ಕೋಸ್ಕರ ಸಿಓಡಿ ಮತ್ತು ಡಿವೈಎಸ್‌ಪಿ ಅವರ ವರದಿ ಬರಲಿ ಎಂದು ಕಾಯುತ್ತಿದ್ದೇವೆ, ಮತ್ತು ಅವರ ವರದಿ ಬಂದ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಪ್ರಾಮಾಣಿಕವಾಗಿ ಹೇಳುವುದಾದರೆ ಯಾರಿಗೆ ಅನ್ಯಾಯವಾಗಿದೆ ಅದನ್ನು ಸರಿಪಡಿಸುವುದಕ್ಕೆ ನಾವಿದ್ದೇವೆಯೇ ಹೊರತು ಅನ್ಯಾಯ ಮಾಡುವುದಕ್ಕೆ ತಯಾರಿಲ್ಲ.

ಅಧ್ಯಕ್ಷರು. —ಮುಂದಿನ ವರದಿ ಬರಲಿ ಎಂದು ಹೇಳುತ್ತಾರೆ. ಈಗ ಮುಂದಿನ ವಿಷಯಕ್ಕೆ ಹೋಗೋಣ.

## ನಿಯಮ 334ರ ಮೇರೆಗೆ

೩-೩೦ ಪಿ. ಎಂ.

ಶ್ರೀ ಎಂ. ಎಸ್. ಪಾಟೀಲ್
ಲೀಲಾದೇವಿ ಆರ್. ಪ್ರಸಾದ್ — ಸದಸ್ಯರು ಗೈರುಹಾಜರಿ.
ಕೆ. ವಸಂತ ಬಂಗೇರ

(i) ಉಳ್ಳಾಲ ಸಮುದ್ರ ತೀರವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವುದು.

ಶ್ರೀ ಬಿ. ಎಂ ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡದ ಮಂಗಳೂರು ತಾಲ್ಲೂಕಿನ ಉಳ್ಳಾಲ ಸಮುದ್ರ ಕಿನಾರೆಯಲ್ಲಿದೆ. ಇದು ಪ್ರಕೃತಿ ಸೌಂದರ್ಯದ ತಾಣವಾಗಿದೆ. ಬಹು ಸಂಖ್ಯೆಯ ವಿಮಾನುಗಾರರು ವಿಮಾನ ಹಿಡಿಯುವ ಮತ್ತು ಮಾರುವ ಆಕರ್ಷಣೀಯ ನೆಲೆಯಾಗಿದೆ. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಅತ್ಯಂತ ಧೈರ್ಯದಿಂದ ಪೋರ್ಚುಗೀಸರ ವಿರುದ್ಧ ಹೋರಾಡಿದ ವೀರ ಮಹಿಳೆ ಅಬ್ಬಕ್ಕರಾಣಿ ವಾಸವಾಗಿದ್ದ ಸ್ಥಳ ಇದಾಗಿದೆ. ಅಲ್ಲದೆ ಭಾರತದ ಅತ್ಯಂತ ಪ್ರಖ್ಯಾತವಾದ ಐದು ದರ್ಗಾಗಳಲ್ಲಿ ಒಂದಾದ ಸೈಯ್ಯದ್ ಶರೀಫುಲ್ ಮದನಿದರ್ಗಾ ಉಳ್ಳಾಲದಲ್ಲಿದೆ. ಸಾವಿರಾರು ಯಾತ್ರಿಕರು ಇಲ್ಲಿಗೆ ದಿನನಿತ್ಯ ಬರುತ್ತಿದ್ದಾರೆ. ಆದರೆ ಇಲ್ಲೊಂದು ಪ್ರವಾಸೋದ್ಯಮ ತಾಣ ಇರುವುದಿಲ್ಲ. ಹಿಂದೊಮ್ಮೆ ಇಲ್ಲಿ ಪ್ರವಾಸೋದ್ಯಮ ತಾಣ ಇರುವುದಿಲ್ಲವೆಂದು ಯೋಚಿಸಿ ಮಾತುಕತೆಯಾಡಿ ಸರಕಾರಕ್ಕೂ ತಿಳಿಸಲಾಗಿತ್ತು ಆದರೆ ಅದು ಇನ್ನು ಯಾವುದೇ ರೂಪುತಾಳಿಲ್ಲ. ಆದ ಕಾರಣ ಇಂತಹ ಸುಂದರವಾದ ಕಡಲ ತಡಿಯಾದ ಉಳ್ಳಾಲದಲ್ಲಿ ಒಂದು ಪ್ರವಾಸೋದ್ಯಮ ನೆಲೆಯನ್ನು ಸ್ಥಾಪಿಸಿ ಬರತಕ್ಕ ಪ್ರಯಾಣಿಕರಿಗೆ ಅನುಕೂಲ ಒದಗಿಸಿಕೊಡುವಂಥಾದ್ದು ಅತ್ಯಂತ ಪ್ರಾಮುಖ್ಯವಾಗಿರುತ್ತದೆ. ಈ ಕುರಿತು ಪ್ರವಾಸೋದ್ಯಮ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೀವರಾಜ ಆಳ್ವ.—ಉಳ್ಳಾಲದಲ್ಲಿ ಬರುವ ವರ್ಷ ಪ್ರವಾಸೋದ್ಯಮದ ಕೇಂದ್ರವನ್ನು ಆರಂಭ ಮಾಡುತ್ತೇನೆ.

(ಉಪಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)